೯

ಬೆವಿಕಂ
BESCOM
# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
## Bangalore Electricity Supply Company Limited

ಸಂಖ್ಯೆ: ಬೆವಿಕಂ/ಬಿಸಿ-9/ಮುಪ್ರವ್ಯ(ನಿವ್ಯ)/ಉಪ್ರವ್ಯ(ಮಾಹ)/ಕ-1(1)/2014-15 / Cys - 23
ಲಗತ್ತು :

ಕಂಪನಿ ಕಾರ್ಯಾಲಯ
ಬೆ.ವಿ.ಕಂ, ಕೆ.ಆರ್.ವೃತ್ತ,
ಬೆಂಗಳೂರು
ದಿನಾಂಕ: 04/06/2014

ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ) ಮತ್ತು (ಹ ಮತ್ತು ವಾ),
ಎಲ್ಲಾ ಮುಖ್ಯ ಇಂಜಿನಿಯರ್(ವಿ), (ವಾ, ಕಾ ಮತ್ತು ಪಾ),
ಎಲ್ಲಾ ಪ್ರಧಾನ ವ್ಯವಸ್ಥಾಪಕರು(ವಿ) ಮತ್ತು (ಹ ಮತ್ತು ವಾ),
ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), (ವಾ, ಕಾ ಮತ್ತು ಪಾ),
ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, (ವಾ, ಕಾ ಮತ್ತು ಪಾ),
ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು(ವಿ) ಮತ್ತು (ಹ ಮತ್ತು ವಾ),
ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿ, (ವಾ, ಕಾ ಮತ್ತು ಪಾ),
ಎಲ್ಲಾ ಕಾರ್ಯಾನಿರ್ವಾಹಾಕ ಇಂಜಿನಿಯರ್(ವಿ), (ವಾ, ಕಾ ಮತ್ತು ಪಾ),
ಕಾರ್ಯಾನಿರ್ವಾಹಾಕ ಇಂಜಿನಿಯರ್(ವಿ), ಜಾಗೃತ ದಳ, ಬೆ.ವಿ.ಕಂ.,
ಎಲ್ಲಾ ಸಹಾಯಕ ಕಾರ್ಯಾನಿರ್ವಾಹಕ ಇಂಜಿನಿಯರ್(ವಿ), (ವಾ, ಕಾ ಮತ್ತು ಪಾ).

ಮಾನ್ಯರೇ,

ವಿಷಯ: : ಮಾಹಿತಿ ಹಕ್ಕು ಅಧಿನಿಯಮ 2005ರಡಿ ಪ್ರತಿ ಇಲಾಖೆಯಲ್ಲೂ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರದ ನಾಮಫಲಕದಲ್ಲಿ ಬರೆಸಿಹಾಕುವ ಮತ್ತು ಮಾಹಿತಿ ಹಕ್ಕು ಅಧಿನಿಯಮ 2005ರಡಿ ಅರ್ಜಿದಾರರಿಗೆ ಮಾಹಿತಿ ನೀಡುವಾಗ ಸಂಪೂರ್ಣ ವಿಳಾಸ ಕುರಿತು.

ಉಲ್ಲೇಖ: 1. ಕರ್ನಾಟಕ ಸರ್ಕಾರದ ಸಚಿವಾಯಲ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಪತ್ರ ಸಂಖ್ಯೆ: ಸಿಆಸುಇ 53 ಆರ್‌ಟಿಐ 2014 ದಿನಾಂಕ: 24.03.2014

2. ಈ ಕಛೇರಿ ಸುತ್ತೋಲೆ ಸಂಖ್ಯೆ: ಬೆ.ವಿ.ಕಂ./ಬಿಸಿ-9/ ಮು.ಪ್ರವ್ಯ./ ಉ.ಪ್ರವ್ಯ/ಕ-1(7)/ 2012-13/ಸಿವೈಎಸ್-30 ದಿನಾಂಕ: 26.04.2013

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ಸಚಿವಾಲಯ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಉಲ್ಲೇಖ 1ರ ಪತ್ರದಲ್ಲಿ ಪ್ರಸ್ತಾಪಿಸಿರುವಂತೆ ಹಾಗೂ ನಿಗಮ ಕಛೇರಿಯ ಉಲ್ಲೇಖ 2ರ ಸುತ್ತೋಲೆಯಲ್ಲಿ ನಿರ್ದೇಶಿಸಿರುವಂತೆ ಅರ್ಜಿದಾರರು ಕೋರಿರುವ ಮಾಹಿತಿಯನ್ನು ಒದಗಿಸುವ ಸಂದರ್ಭದಲ್ಲಿ ಮಾಹಿತಿ ಒದಗಿಸುವ ಸಾರ್ವಜನಿಕ ಮಾಹಿತಿ ಅಧಿಕಾರಿಯ ಪದನಾಮ, ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಮೊದಲ ಮೇಲ್ಮನವಿ ಪ್ರಾಧಿಕಾರದ ಪೂರ್ಣ ವಿಳಾಸ ಹಾಗೂ ದೂರವಾಣಿ ಸಂಖ್ಯೆಯನ್ನು ಖಡ್ಡಾಯವಾಗಿ ನಮೂದಿಸಲು ಸೂಚಿಸಿದ್ದರೂ ಸಹ ಈ ಮಾಹಿತಿಗಳನ್ನು ನಮೂದಿಸುವಲ್ಲಿ ವಿಫಲವಾಗಿರುವ ಪ್ರಕರಣಗಳು ಸರ್ಕಾರ ಹಾಗೂ ಮಾಹಿತಿ ಆಯೋಗವು ಗಮನಿಸಿದ್ದು ಈ ವಿಫಲತೆಯ ಪುನರಾವರ್ತನೆ ಆಗದಂತೆ ವಿಶೇಷ ಗಮನ ಹರಿಸಲು ಸೂಚಿಸಲಾಗಿದೆ.

ಸದರಿ ವಿಫಲತೆಯ ಪುನರಾವರ್ತನೆಯಾದಲ್ಲಿ ತತ್ಸಂಬಂಧ ಅಧಿಕಾರಿಗಳ ವಿರುದ್ದ ನಿಯಮಾನುಸಾರ ಕಠಿಣ ಕ್ರಮ ಜರುಗಿಸಲಾಗುವುದು.

ನಿಮ್ಮ ವಿಶ್ವಾಸಿ,

ಮುಖ್ಯ ಪ್ರಧಾನ ವ್ಯವಸ್ಥಾಪಕರು
(ನಿಗಮ ವ್ಯವಹಾರಗಳು)

ಪ್ರತಿ: 1. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ನಿದೇಶಕರು(ಹ), ಬೆ.ವಿ.ಕಂ. ರವರ ಆಪ್ತ ಕಾರ್ಯಾದರ್ಶಿರವರುಗಳ ಮಾಹಿತಿಗಾಗಿ.
2. ಬೆ.ವಿ.ಕಂ. ಅಂತರ್ಜಾಲ
3. ಮಹಾ ಕಡತ

# ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 53 ಆರ್‌ಟಿಐ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ: 24.03.2014.

ಸಂಖ್ಯೆ 494 ದಿನಾಂಕ 8/4/14

## ಸುತ್ತೋಲೆ

**ವಿಷಯ:** ಮಾಹಿತಿ ಹಕ್ಕು ಅಧಿನಿಯಮ 2005ರಡಿ ಪ್ರತಿ ಇಲಾಖೆಯಲ್ಲೂ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರದ ಹೆಸರುಗಳನ್ನು ನಾಮಫಲಕದಲ್ಲಿ ಬರೆಯಿಸಿ ಹಾಕುವ ಮತ್ತು ಮಾಹಿತಿ ಹಕ್ಕು ಅಧಿನಿಯಮ 2005ರಡಿ ಅರ್ಜಿದಾರರಿಗೆ ಮಾಹಿತಿ ನೀಡುವಾಗ ಸಂಪೂರ್ಣ ವಿಳಾಸ ತಿಳಿಸುವ ಕುರಿತು

---0---

ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 4(1)(ಬಿ)ರನ್ವಯ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳು, ಆಯಾ ಇಲಾಖೆಯಲ್ಲಿನ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳ, ಸಾರ್ವಜನಿಕ ಮಾಹಿತಿ ಅಧಿಕಾರಿಗಳ(ನಿರ್ವಹಿಸುತ್ತಿರುವ ಶಾಖೆ ಮತ್ತು ಕಾರ್ಯದ ವಿವರಗಳೊಂದಿಗೆ), ಮೇಲ್ಮನವಿ ಪ್ರಾಧಿಕಾರಿಗಳ ಹೆಸರು, ಹುದ್ದೆಗಳನ್ನು ಸದರಿ ಕಲಂನಲ್ಲಿ ತಿಳಿಸಿರುವಂತೆ ಇತರ ವಿವರಗಳೊಂದಿಗೆ ಕಛೇರಿಗಳ ಮುಂಭಾಗದ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು ಮತ್ತು ಅಧಿಕಾರಿಗಳು ಬದಲಾವಣೆಯಾಗುವ ಸಮಯದಲ್ಲಿ ಅವುಗಳನ್ನು ಕೂಡಲೇ ಪರಿಷ್ಕರಿಸಲು ಕ್ರಮಕೈಗೊಳ್ಳಬೇಕು. ಹಾಗೆಯೇ ಈ ಎಲ್ಲ ವಿವರಗಳನ್ನು ಕಲಂ 4(2) ರನ್ವಯ ಸ್ವಪ್ರೇರಿತವಾಗಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮಜರುಗಿಸತಕ್ಕದ್ದು. ಈ ಕಾರ್ಯವನ್ನು 31.03.2014ರೊಳಗಾಗಿ ಪೂರೈಸಲು ಮತ್ತು ಮಾಹಿತಿ ಹಕ್ಕು ಅಧಿನಿಯಮ 2005ರಡಿ ಅರ್ಜಿದಾರರಿಗೆ ಮಾಹಿತಿ ನೀಡುವಾಗ ಸಾರ್ವಜನಿಕ ಮಾಹಿತಿ ಅಧಿಕಾರಿಯ ಮತ್ತು ಮೊದಲ ಅಪೀಲು ಪ್ರಾಧಿಕಾರದ ಸಂಪೂರ್ಣ ವಿಳಾಸ, ದೂರವಾಣಿ ಸಂಖ್ಯೆಯೊಂದಿಗೆ ನಮೂದಿಸಿ ಕಳುಹಿಸುವಂತೆ ತಮ್ಮ ಆಡಳಿತದ ಅಧೀನಕ್ಕೊಳಪಡುವ ಎಲ್ಲಾ ಅಧಿಕಾರಿಗಳು, ಸಾರ್ವಜನಿಕ ಪ್ರಾಧಿಕಾರಿಗಳು, ಇಲಾಖಾ ಮುಖ್ಯಸ್ಥರು, ನಿಗಮ/ಮಂಡಳಿ, ಸರ್ಕಾರಿ ಸ್ವಾಮ್ಯ ಸಂಘ/ಸಂಸ್ಥೆಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಲಾಗಿದೆ.

M.D. BESCOM
No: 174
08 APR 2014

(ಪರಮೇಶ್ ಪಾಂಡೆ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)

ಇವರಿಗೆ,

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳು

Office work\Right to information-2014\circulars